ಇಲಾಖಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಧಾನ ಸಭೆಯ ಸಮ್ಮೇಳನ ಸಭಾಂಗಣದಲ್ಲಿ ನೀರು ಶುದ್ಧೀಕರಣ ಘಟಕಗಳ ವಾಸ್ತವ ಸ್ಥಿತಿ ಹಾಗೂ ಅನುಷ್ಠಾನಕ್ಕೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸಭೆ ನಡೆದು ಅದರಲ್ಲಿ ನೀರು ಶುದ್ಧೀಕರಣ ಘಟಕಗಳ ಅನುಷ್ಠಾನಕ್ಕಾಗಿ ಆಗಸ್ಟ್ 1ನೇ ದಿನವನ್ನು ಅಂತಿಮ ಗಡುವೆಂದು ಕಾಲಮಿತಿ ವಿಧಿಸಿ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

ಶ್ರೀ ಎಂ. ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದನ್ನು M/s Fivebro International Privet., Limited., Ahmedabad ಸಂಸ್ಥೆಗೆ ಗುತ್ತಿಗೆ ಕೊಟ್ಟು 17 ತಿಂಗಳುಗಳಾಗಿದೆ. ಇವತ್ತಿನವರೆಗೂ ಘಟಕಗಳನ್ನು ಅಳವಡಿಸಿಲ್ಲ. ಅದರಿಂದ ಗುತ್ತಿಗೆದಾರರು ಯಾರಿದ್ದಾರೆ, ಆ ಒಂದು ಕರಾರು ಒಪ್ಪಂದ ಯಾರಿಗೆ ಆಗಿದೆ, ಅದನ್ನು ರದ್ದುಗೊಳಿಸಬೇಕು ಮತ್ತು ಆ ಗುತ್ತಿಗೆದಾರರನ್ನು ಕಪ್ಪು ಪೆಟ್ಟಿಗೆ ಸೇರಿಸಬೇಕು.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಹೇಳಿಕೆಯಲ್ಲಿ ಏನು ಹೇಳಿದ್ದಾರೆ?

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರಿಗೆ ಕೊಟ್ಟಿರುವಂಥ ಉತ್ತರದಲ್ಲಿ ನಾವು ಕಳೆದ ವಾರ ಸಭೆ ಮಾಡಿದ್ದೇವೆ. ಆಗ ಕಂಪನಿಯವರನ್ನು ಕರೆದು ಅವರಿಗೆ ಏನು ನಿರ್ದೇಶನ ಕೊಟ್ಟಿದ್ದೇವೆಂಬುದನ್ನು ಹೇಳಿದ್ದೇವೆ. ಆಗಸ್ಟ್ 1ನೇ ತಾರೀಖಿನೊಳಗಾಗಿ ಅವುಗಳನ್ನು Commission ಮಾಡಬೇಕೆಂದು ಹೇಳಿದ್ದೇವೆ. ಒಂದು ವೇಳೆ ಆಗಸ್ಟ್ 5ನೇ ತಾರೀಖಿನ ನಂತರವೂ Commission ಆಗಲಿಲ್ಲವೆಂದರೆ, ಅವರನ್ನು block list ಮಾಡುತ್ತೇವೆ.

ಅಧ್ಯಕ್ಷರು: Ok. ಡಾ॥ ವಿಶ್ವನಾಥ ಈ ಪಾಟೀಲ್‌ರವರೆ ಕೇಳಿ.

11. ವಿಷಯ: ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಚಚಡಿ ಮತ್ತು ಮುಡಗೋಡ ಏತ ನೀರಾವರಿ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿರುವ ಬಗ್ಗೆ.

ಡಾ॥ ವಿಶ್ವನಾಥ ಈ ಪಾಟೀಲ್ (ಬೈಲಹೊಂಗಲ): ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಚಚಡಿ ಮತ್ತು ಮುಡಗೋಡ ಏತ ನೀರಾವರಿ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ಭಾರೀ ಮತ್ತು ಮಾಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು):

ಚಚಡಿ ಏತ ನೀರಾವರಿ ಯೋಜನೆಗೆ:

ಚಚಡಿ ಏತ ನೀರಾವರಿ ಯೋಜನೆಗೆ ರೂ. 24.60 ಕೋಟಿಗಳ ಮೊತ್ತಕ್ಕೆ ಸರ್ಕಾರದ ಪತ್ರ ಸಂ. ಜಸಂಇ:09:ವಿಬ್ಯಾಮ:2004, ಬೆಂಗಳೂರು ದಿನಾಂಕ:17.04.2007ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಗೆ ಮುಖ್ಯ ಇಂಜಿನಿಯರ್, ನೀರಾವರಿ (ಉತ್ತರ) ವಲಯ, ಬೆಳಗಾವಿ ರವರು ರೂ. 24.60 ಕೋಟಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಈ ಯೋಜನೆಯ ಮೊದಲನೇ ಹಂತದ ನಿರ್ಮಾಣದಲ್ಲಿ ಬರುವ ಮುಖ್ಯ ಕಾಲುವೆ, ಹಂಚು ಕಾಲುವೆ ಹಾಗೂ ಹೊಲಗಾಲುವೆಗಳನ್ನು ಒಳಗೊಂಡ ಎಲ್ಲಾ ಸಿವಿಲ್ ಕಾಮಗಾರಿ ಹಾಗೂ ರೇಚಕ ಯಂತ್ರಗಳ (pumping machinery) ಅಂದಾಜು ಪತ್ರಿಕೆ ಹಾಗೂ ಕರಡು ಟೆಂಡರ್ ಪ್ರಸ್ತಾವನೆಗಳಿಗೆ ರೂ. 8.21 ಕೋಟಿಗಳ ಮೊತ್ತಕ್ಕೆ ತಯಾರಿಸಿ, ದಿನಾಂಕ:16.01.2009 ರಂದು ಜರುಗಿದ 96ನೇ ತಾಂತ್ರಿಕ ಉಪ ಸಮಿತಿ ಸಭೆಯಲ್ಲಿ ತಿರುವಳಿ ಪಡೆದು ಟೆಂಡರ್ ಕರೆಯಲಾಗಿರುತ್ತದೆ. ಗುತ್ತಿಗೆದಾರರು ಶೇಕಡಾ 60% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ ಕಾರಣ ಸದರಿ ಟೆಂಡರನ್ನು ದಿನಾಂಕ:12.10.2010 ರಂದು ಜರುಗಿದ 115ನೇ ತಾಂತ್ರಿಕ ಉಪ ಸಮಿತಿ ಸಭೆಯಲ್ಲಿ ತಿರಸ್ಕರಿಸಲಾಗಿದ್ದು ಹೊಸದಾಗಿ ಟೆಂಡರ ಕರೆಯಲು ಸೂಚಿಸಲಾಗಿರುತ್ತದೆ.

ತದ ನಂತರ ಈ ಯೋಜನೆಯ ಭಾಗವಾದ ಇನ್ ಟೇಕ ಚಾನೆಲ್, ಪಂಪಿಂಗ್ ಮಶಿನರಿ, ರೈಸಿಂಗ್ ಮೇನ್, ಪಂಪ ಹೌಸ, ಮುಖ್ಯ ಕಾಲುವೆ

ಕಿ.ಮೀ. 0.00 ಯಿಂದ 5.00 ರವರೆಗಿನ ಅಂದಾಜು ಪತ್ರಿಕೆಗಳಿಗೆ ಜಲ ಸಂಪನ್ಮೂಲ ಇಲಾಖೆಯ 2013–14ನೇ ಸಾಲಿನ ದರ ಪಟ್ಟಿಯಂತೆ ರೂ. 8.58 ಕೋಟಿಗಳಿಗೆ ಫೆಬ್ರುವರಿ–2014ರಲ್ಲಿ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಈ ಕಾಮಗಾರಿಗಳಿಗೆ ಟೆಂಡರ್ ಕರೆದು ರೂ. 9.92 ಕೋಟಿಗಳ ಮೊತ್ತಕ್ಕೆ ಟೆಂಡರ್ ಆಧಾರದ ಮೇಲೆ ಗುತ್ತಿಗೆಯನ್ನು ವಹಿಸಲಾಗಿದೆ. ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುತ್ತಿದ್ದು, ಬಾಕಿ ಕಾಮಗಾರಿಗಳಿಗೆ ಅಂದಾಜು ಪಟ್ಟಿ ಹಾಗೂ ಕರಡು ಟೆಂಡರ್ ಪ್ರಸ್ತಾವನೆ ತಯಾರಿಕೆ ಹಂತದಲ್ಲಿರುತ್ತದೆ.

ಚಚಡಿ ಏತ ನೀರಾವರಿ ಯೋಜನೆಯಡಿ ಬೈಲುಹೊಂಗಲ ತಾಲ್ಲೂಕಿಗೆ ಒಟ್ಟು 06 ಗ್ರಾಮಗಳ 2718 ಹೇಕ್ಟೇರ್ ಪ್ರದೇಶವು ನೀರಾವರಿಗೆ ಒಳಪಡುತ್ತದೆ.

ಮುರುಗೋಡ ಏತ ನೀರಾವರಿ ಯೋಜನೆ:

ಮುರುಗೋಡ ಏತ ನೀರಾವರಿ ಯೋಜನೆಗೆ ರೂ. 22.536 ಕೋಟಿಗಳ ಮೊತ್ತಕ್ಕೆ ಸರ್ಕಾರದ ಪತ್ರ ಸಂ.ಜಸಂಇ:09:ವಿಬ್ಯಾಮಾ:2004, ಬೆಂಗಳೂರು ದಿನಾಂಕ:17.04.2007ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಗೆ ಮುಖ್ಯ ಇಂಜಿನಿಯರ್, ನೀರಾವರಿ (ಉ) ವಲಯ ಬೆಳಗಾವಿ ಇವರು ರೂ. 22.536 ಕೋಟಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಈ ಯೋಜನೆಯ ಮೊದಲನೇ ಹಂತದ ಅಂದಾಜು ಪತ್ರಿಕೆ ಹಾಗೂ ಕರಡು ಟೆಂಡರ್ ದಸ್ತುವೇಜುಗಳನ್ನು ರೂ. 18.13 ಕೋಟಿಗಳಿಗೆ ತಯಾರಿಸಿ ದಿನಾಂಕ:16.01.2009ರಂದು ನಡೆದ 96ನೇ ತಾಂತ್ರಿಕ ಉಪ ಸಮಿತಿ ಸಭೆಯಲ್ಲಿ ಮಂಡಿಸಿ ತಿರುವಳಿ ಪಡೆಯಲಾಗಿರುತ್ತದೆ. ಈ ಮಧ್ಯೆ ಸರ್ಕಾರದ ಆದೇಶದನ್ವಯ ಈ ಯೋಜನೆಯನ್ನು ಮುಖ್ಯ ಇಂಜಿನಿಯರ್, ಮಲಪ್ರಭಾ ಯೋಜನಾ ವಲಯ, ಧಾರವಾಡ ಇವರಿಗೆ ವಹಿಸಲಾಗಿರುತ್ತದೆ.

ಈ ಯೋಜನೆಯ ಭಾಗವಾದ ಇನ್ ಟೇಕ್ ಚಾನೆಲ್, ಪಂಪಿಂಗ್ ಮಶಿನರಿ, ರೈಸಿಂಗ್ ಮೇನ್, ಪಂಪ್ ಹೌಸ್, ಡೆಲಿವರಿ ಚೇಂಬರ್ ಹಾಗೂ ಭಾಗಶ: ಕಾಲುವೆ ಕಾಮಗಾರಿಗೆ 2013–14ನೇ ದರಪಟ್ಟಿಯಂತೆ ರೂ 23.70 ಕೋಟಿಗಳ ಮೊತ್ತದ ಅಂದಾಜು ಪತ್ರಿಕೆಯನ್ನು ತಯಾರಿಸಿದ್ದು, ಪರಿಶೀಲನಾ ಹಂತದಲ್ಲಿದೆ ಹಾಗೂ ಕಾಮಗಾರಿಯನ್ನು ಟರ್ನ್‌ಕೀ ಆಧಾರದ ಮೇಲೆ ಕೈಗೊಳ್ಳಲು ಪ್ರಸ್ತಾವನೆ ತಯಾರಿಕಾ ಹಂತದಲ್ಲಿದೆ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಚಚಡಿ ಏತ ನೀರಾವರಿಗೆ ಟೆಂಡರ್ ಕರೆದಿದ್ದೇವೆ. ಮತ್ತೆ ಮುಡಗೋಡ ಏತ ನೀರಾವರಿ ಟೆಂಡರ್ ಪ್ರಕ್ರಿಯೆ ಮಾಡುವುದಕ್ಕೆ process ಎಲ್ಲಾ clear ಮಾಡಿದ್ದೇವೆ. ನಿನ್ನೆಯೂ ಸಹ ಸಭೆ ಮಾಡಿ ಅವರಿಗೆ ತಿಳಿಸಲಾಗಿದೆ.

ಅಧ್ಯಕ್ಷರು: Ok, ಮಾನ್ಯ ಸಿದ್ದು ಬಿ.ನ್ಯಾಮಗೌಡರೆ ಕೇಳಿ.

13. ವಿಷಯ: ಬಾಗಲಕೋಟೆ ಜಿಲ್ಲೆ ಜಮಖಂಡಿ ಪಟ್ಟಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀ ಸಿದ್ದು ಬಿ. ನ್ಯಾಮಗೌಡ (ಜಮಖಂಡಿ): ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆ ಜಮಖಂಡಿ ಪಟ್ಟಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಸಚಿವರು) (ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ): ಜಮಖಂಡಿ ನಗರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜನ್ನು 1993ರಲ್ಲಿ ಪ್ರಾರಂಭಿಸಲಾಗಿದೆ. ಜಮಖಂಡಿ ನಗರದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನೂತನ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವಂತೆ